# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.148/2021** **ಪಿ. ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹೇಮಾವತಿ  ಎಂ . ಬಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 13-08-2025** |

**<u>ಮುಂದುವರೆದ  ಪಾಟೀ ಸವಾಲುಃ  ಶ್ರೀ ಕೆ ಟಿ ಆರ್   ವಕೀಲರಿಂದಃ</u>**

ನಾನು ಆರೋಪಿಗೆ ಸಾಲವನ್ನು ದಿಃ 11-06-2016 ರಂದು ಹಣವನ್ನು ನೀಡಿದ್ದೆನು. ಸದರಿ ಪ್ರಕರಣಕ್ಕೆ  ಸಂಬಂಧಪಟ್ಟ ಬೇರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು  ನಿಮಗೆ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಚೆಕ್ ಬಿಟ್ಟು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.  ನಾನು ನಂಜನಗೂಡಿನಲ್ಲಿ ಸುಮಾರು 15 ವರ್ಷಗಳಿಂದ ವಾಸವಾಗಿದ್ದೇನೆ.  ಆರೋಪಿ ಕೇರಳ ರಾಜ್ಯದವರು ಎಂದರೆ ಸರಿ . ನಾನು ಸ್ನೇಹಿತರ ಮೂಲಕ  ಆರೋಪಿಗೆ  ಹಣವನ್ನು ನೀಡಿರುತ್ತೇನೆ. ಆರೋಪಿಗೆ ನಾನು 2 ಲಕ್ಷ ರೂಪಾಯಿಗಳನ್ನು  ಸಾಲವಾಗಿ ನೀಡಲಿಲ್ಲ ಎಂದರೆ ಸರಿಯಲ್ಲ.  ಆರೋಪಿಗೆ ನೀವು 2 ಲಕ್ಷ ಹಣವನ್ನು ನೀಡದೇ ಇರುವ ಕಾರಣದಿಂದ ಆರೋಪಿಯು ನಿಮಗೆ 2 ಲಕ್ಷ ರೂಪಾಯಿಗಳನ್ನು  ವಾಪಸ್ಸು ಮಾಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಬಳಿ ಬಿ ಪಿ ಎಲ್ ರೇಷನ್ ಕಾರ್ಡ್ ಇದ್ದರೂ ಸಹ  ಸುಳ್ಳಾಗಿ ಇಲ್ಲ ಎಂದು ಹೇಳುತ್ತಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಬಳಿ ಬಿ ಪಿ ಎಲ್ ಕಾರ್ಡ್ ಇಲ್ಲ ಎ ಪಿ ಎಲ್ ಕಾರ್ಡ್  ಇದೆ ಎಂದು ನುಡಿಯುತ್ತಾರೆ.  ನೀವು ಆರೋಪಿ ಗೆ 2 ಲಕ್ಷ ರೂಪಾಯಿಗಳನ್ನು ಕೊಡದೇ ಇರುವ ಕಾರಣದಿಂದ ನಿಮ್ಮ ಪಿರ್ಯಾದು ಊರ್ಜಿತ

ವಲ್ಲ ಎಂದರೆ ಸರಿಯಲ್ಲ. ನೀವು ಮುರುಳಿಧರ ರವರಿಗೆ ಸಾಲವನ್ನು ನೀಡಿದ್ದು ನಿಪಿ–1 ರಲ್ಲಿ ಇರುವ ಚೆಕ್ ಅನ್ನು ದುರುಪಯೋಗ ಮಾಡಿ ಹಣವನ್ನು ವಸೂಲು ಮಾಡಲು ಪ್ರಯತ್ನ ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**